1	2	3	4	5	6
6)	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	7	5	2	
7)	ಹಿರಿಯ ಪ್ರಯೋಗಶಾಲಾ ತಂತ್ರಜ್ಞ	1	–	1	
8)	ಫಾರ್ಮಾಸಿಸ್ಟ್	1	–	1	
9)	ಶುಶ್ರೂಷಾ ದಾದಿ	1	1	–	
10)	ವಾಹನ ಚಾಲಕರು	1	–	1	
	ಒಟ್ಟು	20	11	9	
	ಪ್ರಾಥಮಿಕ ಆರೋಗ್ಯ ಘಟಕ, ನಮ್ಮೂರು				
1)	ವೈದ್ಯಾಧಿಕಾರಿಗಳು	1	–	1	
2)	ದ್ವಿತೀಯ ದರ್ಜೆ ಸಹಾಯಕರು	1	–	1	
3)	ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	2	2	–	
4)	ಫಾರ್ಮಾಸಿಸ್ಟ್	1	–	1	
5)	ಗ್ರೂಪ್ ಡಿ	3	2	1	
	ಒಟ್ಟು	8	4	4	

ರಾಜ್ಯದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕಂದಾಯ ಹೆಚ್ಚಳದ ಬಗ್ಗೆ

24 (32) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಮನೆ ಕಂದಾಯ ದರ ಹೆಚ್ಚಾಗಿರುವುದರಿಂದ ಬಡವರಿಗೆ ಮತ್ತು ಹಿಂದುಳಿದ ವರ್ಗದವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕಂದಾಯ ದರವನ್ನು ಕಡಿಮೆ ಮಾಡಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಇಲ್ಲ.

ಆ) ಕಂದಾಯ ದರವನ್ನು ಸರ್ಕಾರವು ನಿಗದಿಪಡಿಸುವುದಿಲ್ಲ. ಅದನ್ನು ಸಂಬಂಧಿಸಿದ ಗ್ರಾಮ ಪಂಚಾಯತಿಗಳೇ ನಿರ್ಧರಿಸುತ್ತವೆ.

ಶೃಂಗೇರಿ ಕ್ಷೇತ್ರದಲ್ಲಿ ವಸತಿ ಹೀನರ ಸಮೀಕ್ಷೆಯ ಬಗ್ಗೆ

25 (34) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶೃಂಗೇರಿ, ಕೊಪ್ಪ ಹಾಗೂ ಎನ್.ಆರ್. ಪುರ ತಾಲ್ಲೂಕುಗಳಲ್ಲಿರುವ ವಸತಿ ಮತ್ತು ನಿವೇಶನ ರಹಿತರ ಸಮೀಕ್ಷೆ ನಡೆಸಲಾಗಿದೆಯೇ?

ಆ) ಹುಲ್ಲಿನ ಮತ್ತು ಸೋಗೆ ಮನೆಗಳು ಸದರಿ ತಾಲ್ಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?